# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1039
ಸದಸ್ಯರ ಹೆಸರು : ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ)
(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 18.12.2024
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕೊಡಗು ಜಿಲ್ಲೆಯಲ್ಲಿ ಇರುವ ಪೈಸಾರಿ ಜಮೀನುಗಳ ಸಂಖ್ಯೆ ಎಷ್ಟು; (ಮಾಹಿತಿಗಳನ್ನು ಒದಗಿಸುವುದು); | ಕೊಡಗು ಜಿಲ್ಲೆಯಲ್ಲಿ ಒಟ್ಟು 1,77,426 ಎಕರೆ ಮತ್ತು 81 ಸೆಂಟ್ಸ್ ವಿಸ್ತೀರ್ಣದ ಸರ್ಕಾರಿ ಜಮೀನು ಇರುತ್ತದೆ. |
| (ಆ) | ಸದರಿ ಪೈಸಾರಿ ಜಮೀನುಗಳನ್ನು ಭೂ ಮಂಜೂರಾತಿ ಕಾಯ್ದೆ ಅಡಿ ಸಂಬಂಧಿಸಿದವರಿಗೆ ಮಂಜೂರಾತಿ ಮಾಡಿಕೊಳ್ಳಲು ನಿಯಮಗಳಲ್ಲಿ ಅವಕಾಶವಿದೆಯೇ; ಈ ರೀತಿ ಪೈಸಾರಿ ಜಮೀನುಗಳನ್ನು ಮಂಜೂರಾತಿ ಮಾಡಿಕೊಡಲು ಮನವಿಗಳನ್ನು ಸಲ್ಲಿಸಿರುವವರ ಸಂಖ್ಯೆ ಎಷ್ಟು; ಒಟ್ಟು ಎಷ್ಟು ಪ್ರಸ್ತಾವನೆಗಳು ಮನವಿ ರೂಪದಲ್ಲಿ ಬಂದಿವೆ; (ಮಾಹಿತಿ ನೀಡುವುದು) | ಪೈಸಾರಿ ಜಮೀನುಗಳಲ್ಲಿ ಒತ್ತುವರಿ ಮಾಡಿ ಸಾಗುವಳಿ ಮಾಡಿದ್ದಲ್ಲಿ ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 94ಎ, 94ಬಿ, 94ಎ(4), ರಡಿ ಕಲ್ಪಿಸಿರುವ ಅವಕಾಶಗಳಂತೆ ಮಂಜೂರಾತಿಗೆ ಅವಕಾಶವಿರುತ್ತದೆ. ಈ ರೀತಿ ಭೂ ಮಂಜೂರಾತಿ ಕೋರಿ ಕೊಡಗು ಜಿಲ್ಲೆಯಲ್ಲಿ ಒಟ್ಟು 51,025 ಅರ್ಜಿಗಳು ಸ್ವೀಕೃತಿಯಾಗಿರುತ್ತವೆ. ಸದರಿ ಅರ್ಜಿಗಳ ಪೈಕಿ 9373 ಪ್ರಕರಣಗಳಲ್ಲಿ ಮಂಜೂರಾತಿಯಾಗಿರುತ್ತದೆ. 20758 ಅರ್ಜಿಗಳು ಅನರ್ಹತೆಯಿಂದಾಗಿ ತಿರಸ್ಕೃತವಾಗಿರುತ್ತವೆ. ಒಟ್ಟು 30131 ಅರ್ಜಿಗಳು ವಿಲೇಯಾಗಿದ್ದು, 20894 ಅರ್ಜಿಗಳು ಬಾಕಿಯಿರುತ್ತವೆ. |
| (ಇ) | ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನುಗಳನ್ನು ಸಿ ಮತ್ತು ಡಿ ಜಮೀನುಗಳೆಂದು ವರ್ಗೀಕರಿಸಿ ಅಂತಹ ಜಮೀನುಗಳನ್ನು ಅರಣ್ಯ ಇಲಾಖೆಗೆ ವರ್ಗಾಯಿಸುವಂತೆ ಜಿಲ್ಲಾಧಿಕಾರಿಗಳು ನಿರ್ದೇಶನ ನೀಡಿರುತ್ತಾರೆಯೇ; ನೀಡಿದ್ದಲ್ಲಿ ಸಿ ಮತ್ತು ಡಿ ಜಮೀನುಗಳನ್ನು ಗುರುತಿಸಲು ರೂಪಿಸಿರುವ ನಿಯಮಾವಳಿಗಳೇನು ಈ ನಿಯಮಾವಳಿಗಳನ್ವಯ ಸದರಿ ಜಮೀನುಗಳನ್ನು ಸಿ ಮತ್ತು ಡಿ ಜಮೀನುಗಳೆಂದು ವರ್ಗೀಕರಿಸಲಾಗಿದೆಯೇ? | ಸರ್ಕಾರದ ಸುತ್ತೋಲೆ ಸಂಖ್ಯೆ ಆರ್‌ಡಿ 286 ಎಲ್‌ಜಿಪಿ 1977, ದಿನಾಂಕ:26.08.1977 ರಂತೆ ಕೃಷಿ ಇಲಾಖೆಯವರು ಸರ್ಕಾರದ ಬೀಳು ಜಮೀನುಗಳನ್ನು ಎ, ಬಿ, ಸಿ ಮತ್ತು ಡಿ ಎಂದು ವರ್ಗೀಕರಿಸಿದ್ದು, ಕೃಷಿಯೋಗ್ಯವಲ್ಲದ ಜಮೀನುಗಳನ್ನು ಅರಣ್ಯೀಕರಣ ಗೊಳಿಸಲು ಸರ್ಕಾರಿ ಜಮೀನುಗಳ ವರ್ಗದ ಪೈಕಿ ಸಿ ಮತ್ತು ಡಿ ವರ್ಗದ ಜಮೀನುಗಳನ್ನು ಅರಣ್ಯ ಇಲಾಖೆಗೆ ಒಟ್ಟು 486 ಸ.ನಂ.ಗಳಲ್ಲಿ 64137 ಎಕರೆ ಮತ್ತು 46 ಸೆಂಟ್ಸ್ ವಿಸ್ತೀರ್ಣದ ಜಮೀನನ್ನು ವರ್ಗಾಯಿಸಲು ನಿರ್ದೇಶಿಸಲಾಗಿದೆ. ಕೊಡಗು ಜಿಲ್ಲಾಧಿಕಾರಿಯವರ ಆದೇಶ ಸಂಖ್ಯೆ ಎಲ್‌ಎನ್‌ಡಿ(2)/340/77-78, ದಿನಾಂಕ 25/10/1978 ರಂತೆ ಕೃಷಿ ಇಲಾಖೆಯ ಶಿಫಾರಸ್ಸಿನಂತೆ ಸಿ ಮತ್ತು ಡಿ ವರ್ಗದ ಜಮೀನನ್ನು ಅರಣ್ಯ ಇಲಾಖೆಗೆ ಹಸ್ತಾಂತರಿಸಲು ಆದೇಶವಾಗಿರುತ್ತದೆ. |

| | | |
|---|---|---|
| | | ಕೆಲವು ಪ್ರದೇಶಗಳನ್ನು ಸಿ ಮತ್ತು ಡಿ ಎಂದು ವರ್ಗೀಕರಿಸಿರುವುದು ತಪ್ಪಾಗಿರುವುದರಿಂದ ಅರಣ್ಯ ಇಲಾಖೆಗೆ ಹಸ್ತಾಂತರಿಸುವ ಮೊದಲು ಕೃಷಿಗೆ ಯೋಗ್ಯವಾಗಿರುವ ಜಮೀನುಗಳನ್ನು ಅರಣ್ಯ ಮತ್ತು ಸರ್ವೆ ಇಲಾಖೆಯವರ ಸಮನ್ವಯತೆ ಸಾಧಿಸಿ ನ್ಯೂನ್ಯತೆಗಳನ್ನು ಸರಿಪಡಿಸಲು ದಿನಾಂಕ 06.07.1988ರ ಸರ್ಕಾರದ ಸುತ್ತೋಲೆ ಸಂಖ್ಯೆ:ಆರ್‌ಡಿ 106 ಎಲ್‌ಜಿಪಿ 88ರ ಮೂಲಕ ಸೂಚನೆ ನೀಡಲಾಗಿತ್ತು.<br><br>ಮುಂದುವರೆದು, ಸರ್ಕಾರದ ಅಂದಿನ ಮುಖ್ಯ ಕಾರ್ಯದರ್ಶಿಯವರ ನೇತೃತ್ವದ ಸಮಿತಿಯು ನೀಡಿದ ವರದಿ ಆಧಾರದಲ್ಲಿ ಹಸ್ತಾಂತರಿಸಲಾದ ಸಿ ಮತ್ತು ಡಿ ವರ್ಗದ ಜಮೀನುಗಳಲ್ಲಿ ಸರ್ಕಾರದ ಮತ್ತು ಸಾರ್ವಜನಿಕ ಉದ್ದೇಶಗಳಿಗೆ ಜಮೀನು ಅಗತ್ಯವಿರುವುದರಿಂದ ಕಾಯ್ದಿರಿಸಿದ ಅರಣ್ಯ ಎಂದು ಅರಣ್ಯ ಇಲಾಖೆಯವರು ಅಧಿಸೂಚನೆ ಹೊರಡಿಸಿದ ಜಮೀನುಗಳನ್ನು ಹೊರತುಪಡಿಸಿ ಉಳಿದ ಸಿ ಮತ್ತು ಡಿ ವರ್ಗದ ಜಮೀನುಗಳನ್ನು ಅರಣ್ಯ ಇಲಾಖೆಯಿಂದ ಮರು ಹಸ್ತಾಂತರಿಸಲು ದಿನಾಂಕ 03.01.1991 ರ ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ 106 ಎಲ್‌ಜಿಪಿ 88ರನ್ವಯ ಆದೇಶಿಸಲಾಗಿರುತ್ತದೆ.<br>ಕೊಡಗು ಜಿಲ್ಲಾಧಿಕಾರಿಯವರ ದಿನಾಂಕ: 16/03/2007ರ ಆದೇಶ ಸಂಖ್ಯೆ ಜಾಗ:(1)/150/2006-07 ಮತ್ತು ದಿನಾಂಕ: 05/04/2007 ರ ಆದೇಶ ಸಂಖ್ಯೆ: ಜಾಗ(1)ಇತರೆ/160/2006-07 ಹಾಗೂ ಜಾಗ(1)/150/2006-07 ರ ಸದರಿ ಸ.ನಂ.ಗಳ ಆರ್‌ಟಿಸಿಯಲ್ಲಿ ಕಲಂ 9 ಮತ್ತು 10 ರಲ್ಲಿ ಸರ್ಕಾರಿ ಅರಣ್ಯ, ಅರಣ್ಯ ಪೈಸಾರಿ ಅರಣ್ಯ ಇಲಾಖೆ ಎಂದು ನಮೂದಿಸಿರುವುದನ್ನು ಪರಿಷ್ಕರಿಸಿ ಒಟ್ಟು 23,575 ಎಕರೆ ಮತ್ತು 95 ಸೆಂಟ್ಸ್ ವಿಸ್ತೀರ್ಣದ ಜಮೀನನ್ನು ಲ್ಯಾಂಡ್ ಬ್ಯಾಂಕ್‌ಗೆ ಹಸ್ತಾಂತರಿಸಿದೆ ಎಂದು ಆರ್‌ಟಿಸಿ ಕಾಲಂ 11 ರಲ್ಲಿ ದಾಖಲಿಸಲು ಆದೇಶವಾಗಿರುತ್ತದೆ. |
| (ಈ) | ವರ್ಗೀಕರಿಸುವ ಸಂದರ್ಭದಲ್ಲಿ ಕೆಳಹಂತದ ಅಧಿಕಾರಿಗಳು ವ್ಯವಸಾಯ ಮಾಡುತ್ತಿರುವವರ ಜಮೀನುಗಳನ್ನು ಸಹ ಸಿ ಮತ್ತು ಡಿ ಜಮೀನುಗಳು ಎಂದು ಉಲ್ಲೇಖಿಸಿರುತ್ತಾರೆ ಎಂದು ಅನೇಕ ದೂರುಗಳಿದ್ದು, ಈ ಬಗ್ಗೆ ಕೈಗೊಂಡ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | ನಮೂನೆ 50 ಮತ್ತು 53 ರಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಸರ್ಕಾರದ ಪತ್ರ ಸಂಖ್ಯೆ:ಆರ್.ಡಿ 24 ಎಲ್‌ಜಿಪಿ 2017(ಭಾಗ-1) ದಿನಾಂಕ:05.06.2017 ಮತ್ತು 11.08.2017 ರ ನಿರ್ದೇಶನಗಳಂತೆ ವಿಲೇವಾರಿಗೊಳಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| (ಉ) | ಈ ಕುರಿತು ಕಂದಾಯ ಇಲಾಖೆಯು ಅರಣ್ಯ ಇಲಾಖೆಯವರೊಂದಿಗೆ ಮತ್ತೊಂದು ಬಾರಿ ಜಿಲ್ಲೆಯಲ್ಲಿರುವ ಎಲ್ಲಾ ಪೈಸಾರಿ ಜಮೀನುಗಳನ್ನು ಸರ್ವೆ ಮಾಡಿ ವ್ಯವಸಾಯಕ್ಕೆ ಯೋಗ್ಯವಲ್ಲದ ಜಮೀನುಗಳನ್ನು ಮಾತ್ರ ಅರಣ್ಯ ಇಲಾಖೆಗೆ ವರ್ಗಾಯಿಸುವ ಕುರಿತು ಕ್ರಮ ಕೈಗೊಳ್ಳಲು ಮುಂದಾಗುವುದೇ; | ಅಂತಹ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |
| (ಊ) | 1991ರಲ್ಲಿ ಹಿಂಪಡೆಯಲಾದ ಜಮೀನುಗಳು ಎಂಬ ಮಾನದಂಡವನ್ನು ಹೊರತುಪಡಿಸಿ ಸಾಗುವಳಿಗೆ ಯೋಗ್ಯವಾದ ಎಲ್ಲಾ ಜಮೀನುಗಳನ್ನು ನಮೂನೆ 50, 53 ಮತ್ತು 57ರ ಅರ್ಜಿಗಳನ್ನು ಮಾನ್ಯ ಮಾಡಿ ಮಂಜೂರಾತಿ ಮಾಡಿ ಹಕ್ಕುಪತ್ರ ನೀಡುವ ಕುರಿತು ಇಲಾಖೆಯ ಸ್ಪಷ್ಟ ನಿಲುವೇನು? | ನಮೂನೆ 50 ಮತ್ತು 53 ರಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಸರ್ಕಾರದ ಪತ್ರ ಸಂಖ್ಯೆ:ಆರ್.ಡಿ 24 ಎಲ್‌ಜಿಪಿ 2017(ಭಾಗ-1) ದಿನಾಂಕ:05.06.2017 ಮತ್ತು 11.08.2017 ರ ನಿರ್ದೇಶನಗಳಂತೆ ವಿಲೇವಾರಿಗೊಳಿಸಲು ಕ್ರಮವಹಿಸಲಾಗುತ್ತಿದೆ. |

(ಕಡತ ಸಂಖ್ಯೆ:ಆರ್‌ಡಿ 19 ಎಲ್‌ಜಿಓ 2024)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು